ಉತ್ತರ

ಅ) ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನಲ್ಲಿ ಅಂಕಸಂದ್ರ ರಾಜ್ಯ ಅರಣ್ಯ ಪ್ರದೇಶದಲ್ಲಿ ಅನಧಿಕೃತವಾಗಿ ಗುಡಿಸಲು/ಮನೆಗಳನ್ನು ಕಟ್ಟಿಕೊಂಡು ಹಲವಾರು ವರ್ಷಗಳಿಂದ ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಮನೆ ನಿರ್ಮಿಸಿಕೊಂಡಲ್ಲಿ ಅಂತಹ ಪ್ರದೇಶಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಹೀಗಿದ್ದಾಗ್ಯೂ ಅರಣ್ಯ ಪ್ರದೇಶದ ಅತಿಕ್ರಮಣಗಳನ್ನು ತೆರವುಗೊಳಿಸುವ ಬಗ್ಗೆ ಅರಣ್ಯ ಕಾಯ್ದೆ ೧೯೬೩ರಂತೆ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೪೨ (೨೩೬೨)

ಸದಸ್ಯರ ಹೆಸರು : ಶ್ರೀ ಮಾಧುಸ್ವಾಮಿ ಜೆ.ಸಿ (ಚಿಕ್ಕನಾಯಕನಹಳ್ಳಿ)

ಉತ್ತರಿಸುವವರು : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಪ್ರಶ್ನೆ

ಅ) ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಕೆ.ಐ.ಎ.ಡಿ.ಬಿ ಮಂಡಳಿಯವರು ಯಾವ ಯಾವ ಸ್ಥಳದಲ್ಲಿ ಎಷ್ಟೆಷ್ಟು ಭೂಮಿಯನ್ನು ಸರ್ಕಾರ ಸ್ವಾಧೀನಪಡಿಸಿಕೊಂಡಿದೆ ;

ಆ) ಈ ರೀತಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಅನುಸರಿಸುವ ಮಾನದಂಡವೇನು ;

ಇ) ಸ್ವಾಧೀನಪಡಿಸಿಕೊಂಡಿರುವ ಭೂಮಿಯಲ್ಲಿ ಇನ್ನು ಎಷ್ಟು ವಿಸ್ತೀರ್ಣದ ಭೂಮಿ ಕೆ.ಐ.ಎ.ಡಿ.ಬಿ.ಯ ವಶದಲ್ಲಿದೆ.

ಈ) ಕೆ.ಐ.ಎ.ಡಿ.ಬಿ. ಯವರು ನಿಯಮ ಬಾಹಿರವಾಗಿ ಭೂಮಿ ಹಂಚಿಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ) ಹಾಗಿದ್ದಲ್ಲಿ ಈ ಸಂಬಂಧ ಸರ್ಕಾರ ತೆಗೆದುಕೊಂಡ ಕ್ರಮವೇನು ?

ಉತ್ತರ

ಅ) ಒಟ್ಟು ೬೬೩೧ ಎಕರೆ ೩೮ ಗುಂಟೆ ಜಮೀನನನ್ನು ಕೆ.ಐ.ಎ.ಡಿ. ಕಾಯ್ದೆ ಕಲಂ ೧೯೬೬ ರ ಕಲಂ ೨೮(೪) ರನ್ವಯ ಅಧಿಸೂಚನೆ ಹೊರಡಿಸಿ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ. ವಿವರಗಳನ್ನು ಅನುಬಂಧ-೧ರಲ್ಲಿ ನೀಡಲಾಗಿದೆ.

ಆ) ರಾಜ್ಯದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ, ಬೇಡಿಕೆಗೆ ಅನುಗುಣವಾಗಿ ಹಾಗೂ ಕೈಗಾರಿಕೆಗಳ ಸರ್ವತೋಮುಖ ಅಭಿವೃದ್ಧಿಗಾಗಿ ಅವಶ್ಯಕತೆ ಇರುವ ಜಮೀನುಗಳನ್ನು ಕೈಗಾರಿಕಾ ಪ್ರದೇಶಗಳಿಗಾಗಿ ಕೆ.ಐ.ಡ.ಡಿ.ಬಿ ಯಿಂದ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲಾಗುವುದು.

ರಾಜ್ಯ ಉನ್ನತ ಮಟ್ಟದ ಒಪಪಿಗೆ ನೀಡಿಕೆ ಸಮಿತಿ (SHLCC) ಮತ್ತು ರಾಜ್ಯ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಯಲ್ಲಿ (SLSWCC) ಅನುಮೋದನೆ ಪಡೆದ ಉದ್ಯಮಗಳಿಗೆ ಏಕಘಟಕ ಸಂಕೀರ್ಣಗಳ ಆಧಾರದ ಮೇಲೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ರಾಜ್ಯಾದ್ಯಂತ ವಶಪಡಿಸಿಕೊಂಡು ಅಭಿವೃದ್ಧಿಪಡಿಸಿರುವ ಕೈಗಾರಿಕಾ ಪ್ರದೇಶದಲ್ಲಿ ೭೬೭೩.೫೯ ಎಕರೆ ಜಮೀನು ಕೆ.ಐ.ಎ.ಡಿ.ಬಿ.ಯ ವಶದಲ್ಲಿದೆ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಅನುಬಂಧ –೧

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿವತಿಯಿಂದ ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಕೈಗಾರಿಕಾ ವಸಹಾತು ಮತ್ತು ಏಕಘಟಕ ಸಂಕೀರ್ಣಗಳಿಗಾಗಿ ಭೂಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ವಿವರಗಳು
ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಮಾಧುಸ್ವಾಮಿ ಜೆ.ಸಿ. ಪ್ರಶ್ನೆ ಸಂಖ್ಯೆ : ೨೩೬೨

ಕ್ರ. ಸಂ	ಜಿಲ್ಲೆ	ತಾಲ್ಲೂಕು	ಸ್ವಾಧೀನಪಡಿಸಿಕೊಂಡ ಜಮೀನಿನ ವಿಸ್ತೀರ್ಣ ಎ– ಗು
೧	೨	೩	೪
೧	ಬೆಂಗಳೂರು ನಗರ	ಬೆಂಗಳೂರು ಪೂರ್ವ	೨೭೯೦–೨೭
೨		ಬೆಂಗಳೂರು ಉತ್ತರ	೧೯೯೫–೧೦
		ಬೆಂಗಳೂರು ದಕ್ಷಿಣ	೧೭೦೯–೧೨
		ಆನೇಕಲ್	೨೯೫೦–೩೭
		BMICP ಯೋಜನೆ	೨೭೪೪–೩೫
		ಒಟ್ಟು	೧೨೧೮೫–೦೧
೨	ಬೆಂಗಳೂರು (ಗ್ರಾ)	ದೊಡ್ಡಬಳ್ಳಾಪುರ	೯೭೫–೦೪
		ದೇವನಹಳ್ಳಿ	೪೪೭೪–೦೧
		ಹೊಸಕೋಟೆ	೮೯೩–೩೧
		ನೆಲಮಂಗಲ	೧೧೭೦–೩೨
		ರಾಮನಗರ	೧೪೫೯–೨೦
		ಕನಕಪುರ	೨೮೮–೦೩
		ಚನ್ನಪಟ್ಟಣ	೨೭–೧೫
		ಮಾಗಡಿ	೧೬–೩೦
		BMICP ಯೋಜನೆ	೨೨–೧೯
		ಒಟ್ಟು	೯೩೦೭–೩೭

೩	ಚಿತ್ರದುರ್ಗ	ಚಿತ್ರದುರ್ಗ	೪೭೯–೦೫
		ಒಟ್ಟು	**೪೭೯–೦೫**
೪	ದಾವಣಗೆರೆ	ದಾವಣಗೆರೆ	೮೧೭–೨೪
		ಹರಿಹರ	೨೦–೦೯
		ಒಟ್ಟು	**೮೩೭–೩೩**
೫	ದ.ಕನ್ನಡ	ಮಂಗಳೂರು	೩೯೫೫–೯೧
		ಬಂಟ್ವಾಳ	೨೬೧–೪೮
		ಬೆಳ್ತಂಗಡಿ	೨೭–೧೬
		ಒಟ್ಟು	**೪೨೪೬–೩೫**
೬	ಉಡುಪಿ	ಉಡುಪಿ	೨೦೭೫–೦೫
		ಒಟ್ಟು	**೨೦೭೫–೦೫**
೭	ಹಾಸನ	ಹಾಸನ	೨೮೮೭–೦೬
		ಹೊಳೆನರಸೀಪುರ	೨೮–೩೮
		ಒಟ್ಟು	**೨೯೧೬–೦೪**
೮	ಕೊಡಗು	ಸೋಮವಾರಪೇಟೆ	೧೫೦–೨೦
		ಒಟ್ಟು	**೧೫೦–೨೦**
೯	ಶಿವಮೊಗ್ಗ	ಶಿವಮೊಗ್ಗ	೬೧೩–೩೧
		ಸಾಗರ	೧೦–೩೧
		ಭದ್ರಾವತಿ	೮೪೪–೩೦
		ಒಟ್ಟು	**೧೪೬೯–೧೨**
೧೦	ಚಿಕ್ಕಮಗಳೂರು	ಚಿಕ್ಕಮಗಳೂರು	೧೪೩–೦೨
		ಒಟ್ಟು	**೧೪೩–೦೨**
೧೧	ಮೈಸೂರು	ಮೈಸೂರು	೪೧೧೦–೧೮

		ನಂಜನಗೂಡು	೧೨೯೦–೨೧
		ಹುಣಸೂರು	೬೦–೧೭
		ಪಿರಿಯಾ ಪಟ್ಟಣ	೫೯–೦೮
		ಕೆ.ಆರ್.ನಗರ	೧೨೪–೩೦
		ಒಟ್ಟು	**೫೬೪೫–೧೪**
೧೨	ಚಾಮರಾಜನಗರ	ಚಾಮರಾಜನಗರ	೧೪–೩೭
		ಕೊಳ್ಳೇಗಾಲ	೭೪–೨೯
		ಒಟ್ಟು	**೮೯–೨೬**
೧೩	ಮಂಡ್ಯ	ಮಂಡ್ಯ	೧೪೫–೧೦
		ಮದ್ದೂರು	೩೭–೧೦
		ಮಳವಳ್ಳಿ	೬–೩೨
		ಪಾಂಡವಪುರ	೪–೨೦
		ಶ್ರೀರಂಗಪಟ್ಟಣ	೩೩೫–೨೩
		ನಾಗಮಂಗಲ	೧೦೫.೦೬
		ಒಟ್ಟು	**೯೬೯–೨೧**
೧೪	ಉ.ಕನ್ನಡ	ಕಾರವಾರ	೪೩೬–೩೦
		ಕುಮಟಾ	೧೮೬೨–೦೫
		ಹಳಿಯಾಳ	೨೪೦–೩೦
		ಭಟ್ಕಳ	೪೮–೦೧
		ಒಟ್ಟು	**೨೫೮೭–೨೬**
೧೫	ಕೊಪ್ಪಳ	ಕೊಪ್ಪಳ	೧೧೮೩–೩೬
		ಕುಷ್ಟಗಿ	೧೧೧.೩೩
		ಗಂಗಾವತಿ	೪.೧೩
		ಯಲಬುರ್ಗಾ	೩.೨೦
		ಒಟ್ಟು	**೧೩೦೩.೨೨**

೧೬	ಬಿಜಾಪುರ	ಬಿಜಾಪುರ	೪೮೭.೩೯
		ಒಟ್ಟು	**೪೮೭.೩೯**
೧೭	ಬಾಗಲಕೋಟೆ	ಬಾಗಲಕೋಟೆ	೫೬–೦೬
		ಬದಾಮಿ	೫೬–೦೧
		ಮುಧೋಳ	೩೩೨.೧೦
		ಜಮಖಂಡಿ	೨೬೦.೦೬
		ಹುನಗುಂದ	೨೫.೧೦
		ಬೀಳಗಿ	೨೪೧.೧೨
		ಒಟ್ಟು	**೯೨೦.೦೫**
೧೮	ಗದಗ	ಗದಗ	೧೭೧–೩೪
		ಒಟ್ಟು	**೧೭೧–೩೪**
೧೯	ಹಾವೇರಿ	ರಾಣಿಬೆನ್ನೂರು	೯೭೬–೦೨
		ಹಾನಗಲ್	೧೦–೩೨
		ಹಿರೇಕೆರೂರು	೪೬–೧೦
		ಬ್ಯಾಡಗಿ	೨೦–೩೫
		ಸವಣೂರು	೧೬–೨೩
		ಒಟ್ಟು	**೧೦೭೨–೨೨**
೨೦	ಗುಲ್ಬರ್ಗಾ	ಗುಲ್ಬರ್ಗಾ	೧೦೪೮–೨೯
		ಸೇಡಂ	೨೪೭–೧೫
		ಜೇವರ್ಗಿ	೧೨೭–೧೮
		ಯಾದಗಿರಿ	೫೮–೦೬
		ಚಿತ್ತಾಪುರ	೧೪೦೩–೦೬
		ಒಟ್ಟು	**೫೧೦೯–೩೪**
೨೧	ರಾಯಚೂರು	ರಾಯಚೂರು	೨೧೭೩–೧೯
		ದೇವದುರ್ಗ	೨೭–೨೦

		ಲಿಂಗಸೂರು	೧೪೪–೦೮
		ಮಾನವಿ	೫೯–೨೮
		ಸಿಂಧನೂರು	೩೩–೩೯
		ಒಟ್ಟು	**೨೪೩೮–೩೪**
೨೨	ಬಳ್ಳಾರಿ	ಬಳ್ಳಾರಿ	೩೦೮೧–೩೬
		ಹೊಸಪೇಟೆ	೧೨೩–೨೪
		ಸೊಂಡೂರು	೧೧೩–೩೩
		ಶಿರಗುಪ್ಪ	೧೨೧–೧೬
		ಹೂವಿನ ಹಡಗಲಿ	೧೭–೨೦
		ಒಟ್ಟು	**೩೪೫೮–೦೯**
೨೩	ಬೆಳಗಾವಿ	ಬೆಳಗಾವಿ	೬೦೬–೧೦
		ಗೋಕಾಕ	೨೪೩–೧೨
		ಅಥಣಿ	೧೨೦–೨೦
		ಒಟ್ಟು	**೯೭೦–೦೨**
೨೪	ಬೀದರ್	ಬೀದರ್	೧೩೧೭–೧೦
		ಬಸವಕಲ್ಯಾಣ	೧೨೧–೩೬
		ಹುಮನಾಬಾದ	೪೮೨–೩೦
		ಒಟ್ಟು	**೧೯೨೧–೩೬**
೨೫	ಧಾರವಾಡ	ಧಾರವಾಡ	೩೦೪೯–೨೯
		ಹುಬ್ಬಳ್ಳಿ	೫೩೯–೨೨
		ನವಲ್ ಗುಂದ	೧೭–೦೧
		ಕಲಘಟಗಿ	೧೪–೧೯
		ಕುಂದಗೋಳ	೨೦–೨೭
		ಒಟ್ಟು	**೩೬೪೧–೧೪**

೨೬	ಕೋಲಾರ	ಬಂಗಾರಪೇಟೆ	೮೮-೦೦
		ಕೋಲಾರ	೫೯೬-೨೪
		ಮಾಲೂರು	೮೪೩-೩೬
		ಚಿಕ್ಕಬಳ್ಳಾಪುರ	೯೬-೦೦
		ಒಟ್ಟು	೧೬೨೪-೨೦
		ಜುಮ್ಲಾ	೬೬೩೧೪-೨೧

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೪೩ (೧೮೪೪)

ಸದಸ್ಯರ ಹೆಸರು : ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)

ಉತ್ತರಿಸುವವರು : ಶ್ರೀ ಶಿವಾನಂದ ಎನ್. ನಾಯ್ಡು (ಸಣ್ಣ ಕೈಗಾರಿಕಾ ಸಚಿವರು)

ಪ್ರಶ್ನೆ

ಅ) ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ವತಿಯಿಂದ ಕಳೆದ ಮೂರು ವರ್ಷಗಳ ಅವಧಿಯಲ್ಲಿ ವಿವಿಧ ಜಿಲ್ಲೆಗಳಿಗೆ ವಿತರಣೆ ಮಾಡಿರುವ ಸಾಲದ ಮೊತ್ತವೆಷ್ಟು ;

ಆ) ಇದೇ ಅವಧಿಯಲ್ಲಿ ಮಂಡಳಿಯಿಂದ ನೀಡಬೇಕಾಗಿರುವ ಎಷ್ಟು ಮೊತ್ತದ ಸಬ್ಸಿಡಿ ಬಿಡುಗಡೆಗೆ ಬಾಕಿ ಇದೆ ; (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು) ;

ಇ) ಬಾಕಿ ಇರುವ ಸಬ್ಸಿಡಿಯನ್ನು ಬಿಡುಗಡೆ ಮಾಡಲು ಸರ್ಕಾರದ ಮುಂದಿರುವ ಕ್ರಮಗಳೇನು?

ಉತ್ತರ

ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಮಂಡಳಿಯಿಂದ ಸಾಲದ ವಿತರಣೆ ಆಗಿರುವುದಿಲ್ಲ.